ಹಣವನ್ನು ಹೆಚ್ಚಿಸಬೇಕೆಂದು ಈಗಾಗಲೇ ತಿದ್ದುಪಡಿ ಮಾಡಿ ಸರ್ಕಾರದ ಮುಂದೆ ಇಟ್ಟಿದ್ದೇವೆ. ಸರ್ಕಾರ ಇನ್ನು ವಾರದೊಳಗೋ 15 ದಿವಸದೊಳಗೋ ಇದರ ಬಗ್ಗೆ ನಿರ್ಣಯ ತೆಗೆದುಕೊಂಡು 1500ರಿಂದ 3000ಕ್ಕೆ ಹಾಗೂ 750 ಇದ್ದದ್ದನ್ನು 1500 ಮಾಡುತ್ತೇವೆ. ಆದರ ವಿವರವನ್ನು ಕ್ಯಾಬಿನೆಟ್‌ನಲ್ಲಿ ಚರ್ಚಿಸಿ ಆದ ಮೇಲೆ ನಾವು ಹೇಳಬೇಕಾಗುತ್ತದೆ. ಅಕ್ಟೋಬರ್ 2ನೇ ತಾರೀಖಿನೊಳಗೆ ಮಾಡುತ್ತೇವೆ.

ವಿಷಯ :- ರಾಜ್ಯದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಕಟ್ಟುತ್ತಿರುವ ಮನೆಗಳನ್ನು ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 68(437)

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಕಟ್ಟುತ್ತಿರುವ ಮನೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ಕೊಡುವುದು)

ಆ) ಅದಕ್ಕಾಗಿ ಇದುವರೆಗೂ ಖರ್ಚಾಗಿರುವ ಹಣವೆಷ್ಟು?

ಇ) ಈಗ ಕಟ್ಟಲಾಗುತ್ತಿರುವ ಮನೆಗಳು ಯಾವ ಹಂತದಲ್ಲಿವೆ;

ಶ್ರೀ ಗೋಪಿನಾಥ ಆರ್. ಸಾಂಡ್ರಾ

(ವಸತಿ ಸಚಿವರು)

ಜಿಲ್ಲಾಧಿಕಾರಿಗಳಿಂದ 66,000 ಮನೆಗಳು

ಕರ್ನಾಟಕ ಗೃಹ ಮಂಡಳಿಯಿಂದ 40,000 ಮನೆಗಳು

ಒಟ್ಟು 1,06,000 ಮನೆಗಳು

(ಜಿಲ್ಲಾವಾರು ವಿವರಗಳನ್ನು ಅನುಬಂಧ 'ಎ' ಮತ್ತು 'ಬಿ'ನಲ್ಲಿ ಒದಗಿಸಲಾಗಿದೆ.)

2464.41 ಲಕ್ಷ ರೂ.ಗಳು.

ಅನುಬಂಧ 'ಎ' ಮತ್ತು 'ಬಿ' ನಲ್ಲಿ ಒದಗಿಸಲಾಗಿದೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು, 1 ಲಕ್ಷದ 6 ಸಾವಿರ ಮನೆಗಳನ್ನು ಆಶ್ರಯ ಯೋಜನೆ ಅಡಿಯಲ್ಲಿ ಕರ್ನಾಟಕದಲ್ಲಿ ಕಟ್ಟುತ್ತಿದ್ದೇವೆ; ಜೂನ್ 15ನೇ ತಾರೀಖಿನ ಒಳಗೆ ನಾವು ಇದನ್ನು ಮುಗಿಸಿಬಿಡುತ್ತೇವೆ ಎಂದು ಉತ್ತರವನ್ನು ಕೊಟ್ಟಿದ್ದರು. ಆದರೆ ಇವತ್ತು ಇವರು ಉತ್ತರವನ್ನು ಕೊಟ್ಟಿದ್ದಾರೆ, ಡೆಪ್ಯುಟಿ ಕಮಿಷನರ್‌ಗಳ ಮೂಲಕ 66 ಸಾವಿರ ಮನೆ, ಹೌಸಿಂಗ್ ಬೋರ್ಡ್ ಮುಖಾಂತರ 34 ಸಾವಿರ ಮನೆಗಳನ್ನು ಕಟ್ಟುತ್ತೇವೆ, ಈ 60 ಸಾವಿರ ಮನೆಗಳಲ್ಲಿ ಇದುವರೆಗೆಕಪ್ಲೀಟ್ ಆಗಿರುವುದು ಕೇವಲ 2935 ಪಾಯ ಹಾಕಿರತಕ್ಕಂಥಾದ್ದು, ಮಣ್ಣು ತೋಡಿರತಕ್ಕಂಥಾದ್ದು 50 ಸಾವಿರ ಮನೆಗಳು. ಯಾವಾಗ ಇದನ್ನು ಕಂಪ್ಲೀಟ್ ಮಾಡುತ್ತೀರಾ? ಜನಗಳಿಗೆ ನೀವು ಸುಳ್ಳು ಭರವಸೆಯನ್ನು ನೀವು ಏಕೆ ಕೊಡುತ್ತಿದ್ದೀರಾ? ಇದನ್ನು ದಯವಿಟ್ಟು ಬರೆದುಕೊಳ್ಳಿ, ನಾನು ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ ನಿಮಗೆ. ನೀವು ಸುಮ್ಮನೆ ನಕ್ಕುಬಿಟ್ಟು ಉತ್ತರ ಕೊಡುವುದಕ್ಕಾಗುವುದಿಲ್ಲ ಸ್ವಾಮಿ. ನಾನು ಕೇಳುತ್ತಿದ್ದೇನೆ, ನೀವು ಯಾವಾಗ ಕಂಪ್ಲೀಟ್ ಮಾಡುತ್ತೀರಾ? ಜೂನ್ 15ನೇ ತಾರೀಖಿನ ಒಳಗೆ ಕಂಪ್ಲೀಟ್ ಮಾಡುತ್ತೇವೆಂದು ಹೇಳಿ ಜನಗಳಿಗೆ ಮೋಸ ಮಾಡುವುದಕ್ಕೆ ಹೊರಟಿರುವ ಸರ್ಕಾರಕ್ಕೆ ಹಾಗೂ ನಿಮಗೆ ನಾಚಿಕೆಯಾಗುವುದಿಲ್ಲವಾ? ಇವತ್ತು

ಬಡವರೆಲ್ಲಾ ಹಾಳಾಗಿ ಹೋಗಿದ್ದಾರೆ ಮಾನ್ಯ ಅಧ್ಯಕ್ಷರೇ; ನನಗೆ ಹೊಟ್ಟೆಗೆ ಬೆಂಕಿ ಹಾಕಿದ ಹಾಗೆ ಆಗುತ್ತದೆ. ಇವರನ್ನು ನಂಬಿಕೊಂಡು 15 ಸಾವಿರ ಕೊಡುತ್ತೇವೆಂದು ಹೇಳಿ ಸಾಲಸೋಲ ಮಾಡಿ ತಪ್ಪಲೆ ಚೊಂಬನ್ನೆಲ್ಲಾ ಅಡವು ಇಟ್ಟು ಜನಗಳು ಗೋಡೆ ಹಾಕಿಕೊಂಡು ಕೂತಿದ್ದಾರೆ. ಮಳೆ ಬೀಳುತ್ತಿದೆ. ಗೋಡೆಗಳೆಲ್ಲಾ ಕುಸಿದು ಬೀಳುತ್ತಿವೆ. ಎರಡನೆಯದಾಗಿ ನನ್ನ ಕ್ಷೇತ್ರದಲ್ಲಿ 1490 ಮನೆಗಳಿಗೆ 2000 ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಬಿಡುಗಡೆ ಮಾಡಿ ನಾಲ್ಕು ತಿಂಗಳಾದರೂ ಕೂಡ ಅವರುಗಳಿಗೆಲ್ಲಾ ಎರಡನೇ ಕಂತಿನ ಹಣವನ್ನು ನೀವು ಕೊಟ್ಟಿಲ್ಲ. ಗೋಡೆಗಳನ್ನು ಕಟ್ಟಲು ಅವರುಗಳು ನಿಮಗೊಸ್ಕರವಾಗಿ ಕಾದಿದ್ದಾರೆ. ಅವರಿಗೆ ಯಾವಾಗ ಹಣವನ್ನು ಕೊಡುತ್ತೀರಿ ಎಂಬ ಬಗ್ಗೆ ನನಗೆ ಖಚಿತವಾದಂಥ ಉತ್ತರವು ಬೇಕು.

ಶ್ರೀ ಗೋಪಿನಾಥ್ ಆರ್. ಸಾಂಡ್ರ :- ಮಾನ್ಯ ಅಧ್ಯಕ್ಷರೇ, ನಮ್ಮ ಯೋಜನೆಗಳ ಪ್ರಕಾರ ನಾವು ಮನೆಗಳನ್ನು ಕಟ್ಟ ಬೇಕೆಂದು ಹೇಳಿದ್ದೇವೆ. ಕೆಲವೊಂದು ಕಾರಣಗಳಿಂದಾಗಿ ಅವುಗಳನ್ನು ಕಟ್ಟಲು ಆಗಲಿಲ್ಲ. ಒಂದನೇ ಕಾರಣ ಟಾಸ್ಕ್‌ಫೋರ್ಸ್ ಕಮಿಟಿಯವರು ಲ್ಯಾಂಡ್ಸ್‌ನ್ನು ಹ್ಯಾಂಡ್‌ಓವರ್ ಮಾಡುವುದಕ್ಕೆ ತಡವಾಯಿತು. ಆದರಿಂದಾಗಿ ತಡವಾಗಿದೆ. ಹಿಂದೆ ಸಿಓಡಿ ಎನ್‌ಕ್ವೈರಿ ಕೂಡ ಆಯಿತು. ಈಗಿನ ಪ್ರೊಗ್ರೆಸ್ ಏನೆಂದರೆ ಕರ್ನಾಟಕ ಗೃಹಮಂಡಳಿಯವರು 40 ಸಾವಿರ ಮನೆಗಳನ್ನು ಕಟ್ಟಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದು ಆದರಲ್ಲಿ 4113 ಮನೆಗಳು ಪೂರ್ತಿಯಾಗಿವೆ. 8993 ಮನೆಗಳು ಪಾಯದ ವರೆಗೆ ಇವೆ, 394 ಮನೆಗಳು ಕಿಟಕಿಯ ವರೆಗೆ ಆಗಿದೆ. 957 ಮನೆಗಳು ಚಾವಣಿಯವರೆಗೆ ಆಗಿವೆ. ಒಟ್ಟು 14,452 ಮನೆಗಳು ಕಟ್ಟಲ್ಪಟ್ಟಿವೆ. ಹಾಗೆಯೇ ಜಿಲ್ಲಾಧಿಕಾರಿಗಳಿಗೆ 66 ಸಾವಿರ ಮನೆಗಳನ್ನು ಕಟ್ಟ ಬೇಕೆಂದು ನಾವು ಆದೇಶವನ್ನು ಕೊಟ್ಟಿದ್ದೇವೆ. ಆದರಲ್ಲಿ ಪೂರ್ಣಗೊಂಡಂಥ ಮನೆಗಳು 2935 ಮನೆಗಳು. ಪಾಯದ ವರೆಗೆ ಇರುವಂಥಾದ್ದು 20113 ಮನೆಗಳು. ಕಿಟಕಿಯವರೆಗೆ ಆದವುಗಳು 5545 ಮನೆಗಳು. ಚಾವಣಿಯವರೆಗೆ ಆಗಿರುವುವುಗಳು 5310 ಮನೆಗಳು. ಒಟ್ಟು 33910 ಮನೆಗಳು ವಿವಿಧ ಹಂತದಲ್ಲಿದೆ. ಒಟ್ಟು ಮನೆಗಳ ಸಂಖ್ಯೆ 48362. ಇವುಗಳು ಅಕ್ಟೋಬರ್ 2ನೇ ತಾರೀಖಿಗೆ ಕನಿಷ್ಟ ಈ ಮನೆಗಳನ್ನು ಫಲಾನುಭವಿಗಳಿಗೆ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಸಚಿವರೇ, ನಾನು ಕೇಳುತ್ತಿರುವುದು ಸರಳವಾದ ಎರಡು ವಿಚಾರಗಳನ್ನು ಮಾತ್ರ. ಒಂದನೇದಾಗಿ 1ಲಕ್ಷದ 6ಸಾವಿರ ಮನೆಗಳನ್ನು ನೀವು ಯಾವಾಗ ಪೂರ್ಣಗೊಳಿಸುತ್ತೀರಿ? ಒಂದು ನಿಗದಿತ ದಿನಾಂಕವನ್ನು ಹೇಳಿ. ಎರಡನೇದಾಗಿ ಇವರನ್ನು ನಂಬಿಕೊಂಡು ಜನರು ಬಡವರು, ಸಾಲ ಮಾಡಿ ತಪ್ಪಲೆ ಚೆಂಬುಗಳನ್ನು ಅಡವು ಇಟ್ಟು ಮಾಂಗಲ್ಯವನ್ನು ಮಾರಿ 10 ಸಾವಿರ ರೂಪಾಯಿಗಳನ್ನು ಡಿಸಿ ಯವರು ಕೊಡುತ್ತಾರೆ ಎಂದು ಹೇಳಿ. ಗೊಡೆ ಕಟ್ಟಿಸಿಕೊಂಡು ನಿಂತಿದ್ದಾರೆ. ಮಳೆ ಬಂದು ಗೊಡೆಗಳು ಹೊರಟು ಹೋಗುತ್ತಾ ಇದೆ. ಇದು ನಿಮ್ಮ ಗಮನಕ್ಕೆ ಬಂದಿಲ್ಲವೇ? ನೀವು ಯಾವಾಗ ಹಣವನ್ನು ರಿಲೀಸ್ ಮಾಡುತ್ತೀರಿ ಎಂದು ಖಚಿತವಾಗಿ ಹೇಳಿ. ಉಳಿದ ವಿಚಾರಗಳು ನನಗೆ ಸಂಬಂಧವಿಲ್ಲ. ಯಾವಾಗ ಹಣವನ್ನು ರಿಲೀಸ್ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಗೋಪಿನಾಥ್ ಆರ್.ಸಾಂಡ್ರಾ :- ಈಗಾಗಲೇ ನಾವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂಬುದನ್ನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : - ನೀವು ಯಾವಾಗ ಇವುಗಳನ್ನು ಕಂಪ್ಲೀಟ್ ಮಾಡುತ್ತೀರಾ ಹೇಳಿ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : - ಆಕ್ಟೋಬರ್ ಎರಡನೇ ತಾರೀಖಿನೊಳಗಾಗಿ 40 ಸಾವಿರ ಮನೆಗಳನ್ನು ಕಟ್ಟಿ ಮುಗಿಸುತ್ತೇವೆ. ಡಿಸೆಂಬರ್ ತಿಂಗಳಿನೊಳಗಾಗಿ 1 ಲಕ್ಷದ 6 ಸಾವಿರ ಮನೆಗಳನ್ನು ಪೂರ್ಣಗೊಳಿಸುವುದಕ್ಕೆ ನಾವು ನಿರ್ಣಯವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಪಿ.ಜಿ.ಆರ್ ಸಿಂಧ್ಯ : - ಹಣವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎಂಬುದನ್ನು ಹೇಳಿ. ಅಲ್ಲಿ ಜನರು ಸಾಲ ಸೋಲ ಮಾಡಿಕೊಂಡು ಸಾಯುತ್ತಾ ಇದ್ದಾರೆ; ಗೊಡೆ ನಿಲ್ಲಿಸಿದ್ದಾರೆ, ಮಳೆಯಲ್ಲಿ ನೆನೆದರೆ ಬೀಳುತ್ತಾ ಇದೆ. ಇದಕ್ಕೆ ಏನು ಮಾಡುತ್ತೀರಿ ಎಂದು ಹೇಳಿ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಚಿತ್ರದುರ್ಗ ಟೌನ್‌ನಲ್ಲಿ ಗೃಹನಿರ್ಮಾಣ ಮಂಡಲಿಯವರು ಮನೆಗಳನ್ನು ಕಟ್ಟುತ್ತಿದ್ದಾರೆ. ಆ ಕಂಟ್ರಕ್ಟರ್‌ಗಳಿಗೆ ಹಣ ಕೊಟ್ಟಿಲ್ಲ. ಇವರಿಗೆ ನಾಚಿಕೆಯಾಗಬೇಕು; ಹಣ ಇದೆ ಎಂದು ಹೇಳುವುದಕ್ಕೆ.

ಶ್ರೀ ಆರ್.ವಿ ದೇಶಪಾಂಡೆ: ಅಧ್ಯಕ್ಷರೇ, ಸಚಿವ ಸಾಂಡ್ರಾ ಅವರು ವಸ್ತು ಸ್ಥಿತಿ ಗಮನದಲ್ಲಿಟ್ಟುಕೊಂಡು.....

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಸಚಿವರು ಉತ್ತರ ಹೇಳುವವರೆಗೂ ಕಾದು ಉತ್ತರದಿಂದ ಸಮಾಧಾನ ಆಗದೇಹೋದರೆ. ತಾವು ಪ್ರಶ್ನೆಯನ್ನು ಕೇಳಬಹುದು. ಸಭೆಯ ಸಂಪ್ರದಾಯದ ಪ್ರಕಾರ ಪ್ರಶ್ನೋತ್ತರ ಕಾಲದಲ್ಲಿ ವಿವರಗಳನ್ನು ಸಂಗ್ರಹಿಸುವುದಕ್ಕೆ ಅವಕಾಶವಿದೆ. ಆದರೆ ಪ್ರಶ್ನೆ ಕೇಳುವಾಗಲೇ ಸಮಸ್ತ ಶಬ್ದಗಳನ್ನು ಉಪಯೋಗಿಸುವುದು ಈ ಸಭೆಯ ಗೌರವಕ್ಕೆ ತಕ್ಕದ್ದಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: - ಅಧ್ಯಕ್ಷರೇ, ಕಾನೂನು ಸಚಿವರು ಪ್ರವೇಶ ಮಾಡಿದ ಮೇಲೆ ನನಗನ್ನಿಸಿತು, ಕಾನೂನನ್ನೇ ಹೇಳೋಣ ಅಂತ. ಜುಲೈ 1ನೇ ತಾರೀಖಿನ ರಾಜ್ಯಪತ್ರದಲ್ಲಿ ಪುಟ 28ರಲ್ಲಿ ಒಂದು ಮಾತನ್ನು ಸರ್ಕಾರ ಕಮಿಟ್ ಮಾಡಿತ್ತು; ಅದೇನೆಂದರೆ,

"In Government orders cited above 1 to 5, Government have been pleased to accord approval for the construction of 30,000 EWS houses with the unit cost of Rs. 16,000/- in all the urban areas of the State and 1,75,000 EWS houses and another 19,880 EWS houses to commemorate the birth centenary of Dr. B.R. Ambedkar, in all the rural areas of the State; 40,000 Ashraya type EWS houses for the victims of the heavy rainfall in the districts of Mysore, Kolar, Tumkur with the unit cost of Rs. 15,000/- to be constructed by the Karnataka Housing Board."

ಇವೆಲ್ಲವನ್ನೂ ಸರ್ಕಾರ ಅಧಿಕೃತ ಜ್ಞಾಪನಪತ್ರದಲ್ಲಿ ಪ್ರಸಿದ್ಧಿಪಡಿಸಿ, the Government Order No. HUD 632:KHB:91 dtd. 28.1.92, as against the Cabinet decision, ನೀವು ಇಂಥಿಂಥವರಿಗೆ ಕಂಟ್ರಾಕ್ಟ್ ಕೊಡ್ತೇವೆ ಅಂತ ಹೇಳಿ 13 ಜನ ಕಂಟ್ರಾಕ್ಟರ್‌ಗಳನ್ನು

ಆಯ್ಕೆಮಾಡಿದಿರಿ. ಏತಕ್ಕೆ ಈ ಪ್ರಶ್ನೆ ಬಂತು ಎಂಬುದನ್ನು ಹೇಳುತ್ತೇನೆ. ತಮ್ಮ ಉತ್ತರದಲ್ಲಿ 66,000 houses by Deputy Commissioner, 40,000 houses by Karnataka Housing Board, ಎಂದು ಹೇಳಿದ್ದೀರಿ? ನನ್ನ ಪ್ರಶ್ನೆ ನಿಮ್ಮ ಅಧಿಕೃತ ಜ್ಞಾಪನಪತ್ರದಲ್ಲಿ " .... to the Government order No: HUD; 632:KHB:91 dtd.. 28.1.92, the following agencies have been recommended for entrustment of work". ಎಂದು ಹೇಳಿ ಅಡ್ವಾನ್ಸ್ ಕೊಟ್ಟು ಮಾಡಿದರಲ್ಲಾ, ಆ ಏಜನ್ಸಿಗಳೆಲ್ಲಾ ಏನಾದರೂ ರದ್ದು ಮಾಡಿದ್ದೀರಾ? ನಿಮ್ಮ ಉತ್ತರದಲ್ಲಿ 66 ಸಾವಿರ ಮನೆಗಳನ್ನು ಜಿಲ್ಲಾಧಿಕಾರಿಗಳು 40 ಸಾವಿರ ಮನೆಗಳನ್ನು ಹೌಸಿಂಗ್‌ಬೋರ್ಡಿನವರು ಕಟ್ಟುತ್ತಾರೆಂದು ಹೇಳಿ under the Gazette Notification 13 ಜನ ಕಂಟ್ರಾಕ್ಟರ್‌ಗಳನ್ನು ಅಪ್ರೂವ್ ಮಾಡಿದ್ದೀರಿ ಮತ್ತು ಅವರಿಗೆ ಅಡ್ವಾನ್ಸ್ ಕೊಟ್ಟಿದ್ದೀರಿ; ಈಗ ನೀವು ಏಜೆನ್ಸಿಯನ್ನು ಮಾಡಿದ್ದೀರಲ್ಲಾ ಇವರ ಗತಿಯೇನಾಯ್ತು?

3.35 ಪಿ. ಎಂ.

ಎರಡನೆಯದು, ಸರ್ಕಾರ ತಾನು ಹಮ್ಮಿಕೊಂಡಿರತಕ್ಕಂಥ ಕಾರ್ಯಕ್ರಮಗಳನ್ನು ನಾನು ಓದಿದಂತಹ ಹಾಗೂ ಪೇಜ್ 38ರಲ್ಲಿ ಹೇಳಿದಂತಹ ಪ್ರೀಯಾಂಬಲ್‌ನಲ್ಲಿ ಹೇಳಿದ್ದಾರಲ್ಲಾ, ಅಂಬೇಡ್ಕರ್ ಮನೆ 1 ಲಕ್ಷ 75 ಸಾವಿರ ಮತ್ತೊಂದು, ಆ ವಿವರವನ್ನು ಕೊಡುತ್ತೀರಾ, ಈ ಎರಡು ಕಮಿಟ್‌ಮೆಂಟ್‌ಗಳಿಗೆ ಉತ್ತರ ಕೊಡುತ್ತೀರಾ? ಮೊದಲನೆಯದು, Commitment to the State. ಎರಡನೆಯದು, to the contracts. ಈಗ ಏಜೆನ್ಸಿ ಚೇಂಜ್ ಮಾಡಿದ್ದೇವೆಂದು ಹೇಳಿದ್ದೀರಿ; What happened to this? whether these agencies are still alive? If so, what happened to the monies advanced?

ಶ್ರೀ ಗೋಪಿನಾಥ್ ಆರ್.ಸಾಂಡ್ರ :- ನಾವು ಜಿಲ್ಲಾಧಿಕಾರಿ ಕಡೆಯಿಂದ 66 ಸಾವಿರ ಮನೆಗಳನ್ನು ಕಟ್ಟಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಹಿಂದೆ 2 ಲಕ್ಷ 35 ಸಾವಿರ ಮನೆಗಳನ್ನು ಕಟ್ಟಬೇಕು ಹಾಗೂ ಯಾವ್ಯಾವುದನ್ನು ಕಟ್ಟಬೇಕೆಂದು ಹೇಳಿದ್ದೇವೆ. ಅಂಬೇಡ್ಕರ್ ಮನೆಗಳನ್ನು ಕಟ್ಟಲು ನಾವು ಜಿಲ್ಲಾಧಿಕಾರಿಗಳಿಗೆ ಒಪ್ಪಿಸಿದ್ದೇವೆ. ಅದಕ್ಕೆ ಬೇಕಾದಂತಹ ಹಣವನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲೆಲ್ಲಿ ಹಣವನ್ನು ರಿಲೀಸ್ ಮಾಡಿದ್ದೇವೆ ಅದನ್ನು ಜಿಲ್ಲಾವಾರು ಬೇಕಾದರೆ ಓದುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ :- ಬೇಕಾಗಿಲ್ಲ; ಆಕ್ಟೋಬರ್‌ನಲ್ಲಿ ಮುಗಿಸುತ್ತೇವೆಂದು ಹೇಳಿದ್ದೀರಿ. ಅದು ನಿಜವೇ?

(ಗೊಂದಲ)

SRI D.B. CHANDREGOWDA: What happened to the agency fixed earlier?

ಶ್ರೀ ಗೋಪಿನಾಥ್ ಆರ್.ಸಾಂಡ್ರ :- ಈಗಾಗಲೇ ನೀವು ಆ ಪ್ರಶ್ನೆಯನ್ನು ಕೇಳಿದ್ದೀರಿ, ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಬೇರೆ ಪ್ರಶ್ನೆ ಕೇಳಿದರೆ ಅದಕ್ಕೆ ಬೇರೆ ಉತ್ತರ ಕೊಡುತ್ತೇನೆ. ಮಾನ್ಯ ಸಿಂಧ್ಯರವರಿಗೆ ಬಡವರ ಬಗ್ಗೆ ಬಹಳ ಕಳಕಳಿ ಇದೆ. ಅವರಂತೆ ನಮಗೂ ಇದೆ. ಆದಷ್ಟು ಬೇಗನೇ ನಾನು ಆಗಲೇ ಹೇಳಿದಂತೆ ಆಕ್ಟೋಬರ್ 2ನೇ ತಾರೀಖಿನೊತ್ತಿಗೆ 40 ಸಾವಿರ ಮನೆಗಳನ್ನು ನಾವು ಕಟ್ಟುತ್ತೇವೆ.

ಡಿಸೆಂಬರ್‌ನೊಳಗೆ ಟಾರ್‌ಗೆಟ್ ಎಷ್ಟಿದೆ ಅಷ್ಟನ್ನೂ ಮುಗಿಸುತ್ತೇವೆ. ಡಿಲೇ ಆಗಿದ್ದು ನಿಜ; ಬೇರೆ ಬೇರೆ ಕಾರಣಗಳಿಂದ ಡಿಲೇ ಆಗಿದೆ. ಮೂರು ತಿಂಗಳಲ್ಲಿ ಆದಂತಹ ಪ್ರೋಗ್ರೆಸನ್ನು ನೋಡಿದರೆ ನೀವು ನಾವು ಆಶ್ಚರ್ಯಪಡುವಂಥದ್ದು, ಅದಕ್ಕೆ ಬೇಕಾಗುವಂತಹ ಹಣವನ್ನು ಕೊಡುತ್ತೇವೆ. ಯಾರ್ಯಾರಿಗೆ ಎಷ್ಟೆಷ್ಟು ಕೊಟ್ಟಿದ್ದೇವೆ. ಎಷ್ಟೆಷ್ಟು ರಿಲೀಸ್ ಮಾಡಿದ್ದೇವೆ ಎಷ್ಟು ಖರ್ಚಾಗಿದೆ ಎನ್ನುವ ಬಗ್ಗೆ ನನ್ನ ಹತ್ತಿರ ವಿವರ ಇದೆ. ಬೇಕಾದರೆ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಾನು ಕೇಳುತ್ತಿರುವುದು ಒಂದೇ ಪ್ರಶ್ನೆ. ನನಗೆ ಬೇರೆ ವಿವರಗಳು ಬೇಕಾಗಿಲ್ಲ. ಬಡವರಿಗೆ ಮನೆಗಳನ್ನು ಕೊಡುತ್ತೇವೆಂದು ಬಿ.ಡಿ.ಓ ಮೂಲಕ ಡೆಪ್ಯುಟಿ ಕಮೀಷನರ್‌ಗಳು ಕಾಗದವನ್ನು ಕೊಟ್ಟಿದ್ದಾರೆ. ಎರಡೆರಡು ಸಾವಿರ ರೂಪಾಯಿಗಳನ್ನು ಅವರಿಗೆ ರಿಲೀಸ್ ಮಾಡಿದ್ದೀರಿ ಅವರೇನು ಮಾಡಿದ್ದಾರೆ ಅಂದರೆ 8-10 ಸಾವಿರ ರೂಪಾಯಿಯಷ್ಟು ಮನೆಗಳಿಗೆ ಖರ್ಚು ಮಾಡಿ ಗೊಡೆಗಳನ್ನು ಹಾಕಿದ್ದಾರೆ. ನೀವೂ ಸೆಕೆಂಡ್ ಇನ್‌ಸ್ಟಾಲ್‌ಮೆಂಟ್ ದುಡ್ಡನ್ನು ಯಾವತ್ತು ರಿಲೀಸ್ ಮಾಡುತ್ತೀರಿ ಎನ್ನುವ ಉತ್ತರವನ್ನು ನನಗೆ ಕೊಡಿ. ಅದೊಂದೇ ನನಗೆ ಬೇಕಾಗಿರುವುದು.

ಶ್ರೀ ಗೋಪಿನಾಥ್ ಆರ್.ಸಾಂಡ್ರ:- ಹಿರಿಯ ಸದಸ್ಯರು ಸರಿಯಾದ ಮಾಹಿತಿಯನ್ನು ಪಡೆಯದೇ ಕೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವು ಹಣವನ್ನು ರಿಲೀಸ್ ಮಾಡಿ.

SRI GOPINATH R.SANDRA:- I want to tell you, we have released the amount. Not only that, ನಾವು ಕಂಡೀಷನ್ಸ್ ಹಾಕಿದ್ದೇವೆ.

(ಗೊಂದಲ)

ಶ್ರೀ ಆರ್.ಎನ್ ನಾಯಕ್:- ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ; ಅವರು ಕೇಳುತ್ತಿಲ್ಲ.

ಶ್ರೀ ಗೋಪಿನಾಥ್ ಆರ್.ಸಾಂಡ್ರ:- ನಾವು ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ. 36 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೇವೆ. ಆದರೆ ವಿವರವನ್ನು ಕೊಡುತ್ತೇನೆ. ಮೊದಲು 13 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದೇವೆ;ನಂತರ 7 ಕೋಟಿ ರೂಪಾಯಿ ಮಾಡಿದ್ದೇವೆ. ಈಗ 10 ಕೋಟಿ ರೂಪಾಯಿಯನ್ನು ರಿಲೀಸ್ ಮಾಡುವಂತಹ ವ್ಯವಸ್ಥೆ ಮಾಡಿದ್ದೇವೆ. 1.24 ಕೋಟಿ ರೂಪಾಯಿಗಳು ಈ ಮನೆಗಳನ್ನು ಮುಗಿಸಲಿಕ್ಕೆ ಬೇಕಾಗುತ್ತದೆ. ಆ ಹಣವನ್ನು ಸುವ್ಯವಸ್ಥಿತವಾಗಿ ಬಿಡುಗಡೆ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಯಾವಾಗ ರಿಲೀಸ್ ಮಾಡುತ್ತೀರಾ?

ಶ್ರೀ ಗೋಪಿನಾಥ್ ಆರ್.ಸಾಂಡ್ರ:- ರಿಲೀಸ್ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:- ಇದು ಬಹಳ ಮಹತ್ವದ ವಿಚಾರವಾಗಿದೆ. ಮಾನ್ಯ ಸಚಿವರು ಉತ್ತರ ಕೊಡುವಾಗ ಸರ್ಕಾರದವರು ಮುಂಚೆ ಒಂದು ನಿರ್ಣಯವನ್ನು ಮಾಡಿದ್ದರು, ಅದರಂತೆ ಪ್ರತಿಯೊಂದು ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದರು. ಅದರ ನಂತರ ಮಾನ್ಯ ಚಂದ್ರೇಗೌಡರು ಹೇಳಿದಹಾಗೆ ಎಲ್ಲಾ ಮನೆಗಳನ್ನು ಹೌಸಿಂಗ್ ಬೋರ್ಡ್ ಮುಖಾಂತರ ಕಟ್ಟಬೇಕಾಗಿತ್ತು; ಆದಾದನಂತರ ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾದ ನಂತರ

ಮಾನ್ಯ ಗೋಪಿನಾಥ್ ಸಾಂಡ್ರರವರು ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡ ನಂತರ ಬಹಳ ದೊಡ್ಡ ಹಗರಣ ಆಗಿತ್ತು, ಆಶ್ರಯದಲ್ಲಿ; ಅದರ ಬಗ್ಗೆ ಸಿ.ಓ.ಡಿ ಎನ್‌ಕ್ವೈರಿಗೆ ಆರ್ಡರ್ ಆಯಿತು. 1500 ಮನೆಗಳನ್ನು ಕಟ್ಟುತ್ತೇವೆಂದು ಹೇಳಿದರು. ಆಗ ಎರಡು ಏಜೆನ್ಸಿ ಆದವು. ಒಂದು ಡೆಪ್ಯುಟಿ ಕಮೀಷನರ್, ಮತ್ತೊಂದು ಹೌಸಿಂಗ್ ಬೋರ್ಡ್, ಈಗ ಬಹಳಷ್ಟು ಜನ ಹೌಸಿಂಗ್ ಬೋರ್ಡ್ ಕಂಟ್ರಾಕ್ಟರ್ಸ್ ಕೆಲಸ ನಿಲ್ಲಿಸಿ ನಮಗೆ ನೀವು ಮುಂಚೆ ಹೆಚ್ಚು ಮನೆ ಕೊಟ್ಟಿದ್ದಿರಿ, ಈಗ ಮನೆ ಕಡಿಮೆ ಕೊಟ್ರಿ, ನಮ್ಮ ಅಲೋಕೇಷನ್ ಕಡಿಮೆ ಮಾಡಿದ್ದೀರಿ...

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಇದು ಬಹಳ ಪ್ರಮುಖವಾದ ವಿಚಾರ.

ಅಧ್ಯಕ್ಷರು:- ನಾನು ಹೇಳುವುದು ಸ್ವಲ್ಪ ಕೇಳಿ. ಸಾಂಡ್ರಾರವರೇ, ನಿಮ್ಮ ಹತ್ತಿರ ಖಚಿತವಾದ ಮಾಹಿತಿ ಇಲ್ಲದಿದ್ದರೆ ಮುಂದೆ ಉತ್ತರ ಹೇಳಿ.

(ಗೊಂದಲ)

ಶ್ರೀ ಬಸವರಾಜರಾಯ ರೆಡ್ಡಿ:- ಮಾನ್ಯ ಅಧ್ಯಕ್ಷರೇ, ಬೇಕಾದರೆ ಈ ಪ್ರಶ್ನೆಯನ್ನು ಅರ್ಧ ಗಂಟೆಗೆ ಚರ್ಚೆಗೆ ಹಾಕಿ.

(ಗೊಂದಲ)

MR. SPEAKER: I am going to allow it for half-an-hour discussion.

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ವಿವರವನ್ನು ಈಗಲೇ ಹೇಳುತ್ತೇನೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:- ಹಾಗಾಗಿ ಬಹಳಷ್ಟು ಜನ ಹೌಸಿಂಗ್ ಬೋರ್ಡ್ ಕಂಟ್ರಾಕ್ಟರ್ಸ್ ಕೆಲಸ ನಿಲ್ಲಿಸಿ ನಮಗೆ ಅಲಾಟ್ ಮಾಡಿದ್ದು ಕಡಿಮೆ ಮಾಡಿದ್ದೀರಿ. ಕಾಸ್ಟ್ ಆಫ್ ಪ್ರೊಡಕ್ಷನ್ ಮನೆಯದ್ದು ಹೆಚ್ಚಾಗಿದೆ ಎಂದು ಹೈಕೋರ್ಟ್‌ಗೆ ಹೋಗಿದ್ದಾರೋ ಇಲ್ಲವೋ?

ಶ್ರೀ ಗೋಪಿನಾಥ್ ಆರ್ ಸಾಂಡ್ರಾ:- ಹೋಗಿದ್ದಾರೆ.

ಶ್ರೀ ಆರ್.ವಿ.ದೇಶ್‌ಪಾಂಡೆ:- ಉತ್ತರ ಕೊಡಿ.

ಶ್ರೀ ಗೋಪಿನಾಥ್ ಆರ್ ಸಾಂಡ್ರಾ:- ಬೇರೆ ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಆರ್.ವಿ.ದೇಶ್‌ಪಾಂಡೆ:- 40 ಸಾವಿರ ಮನೆಗಳನ್ನು ಹೌಸಿಂಗ್ ಬೋರ್ಡ್‌ನಿಂದ ಕಟ್ಟಬೇಕಾಗಿತ್ತು.

ಶ್ರೀ ಆರ್.ಎನ್ ನಾಯಕ್:- ಇದೇನು ಸಾರ್? ಒಂದು ಪ್ರಶ್ನೆ ಮೇಲೆ ಎಷ್ಟು ವೇಳೆ ತೆಗೆದುಕೊಳ್ಳುತ್ತಾರೆ?

(ಗೊಂದಲ)

ಶ್ರೀ ಆರ್.ವಿ.ದೇಶ್‌ಪಾಂಡೆ:- ಈಗ ಡೆಪ್ಯುಟಿ ಕಮೀಷನರ್‌ನಿಂದ 66 ಸಾವಿರ ಮನೆಗಳನ್ನು ಕಟ್ಟಬೇಕಾಗಿತ್ತು. ಹೌಸಿಂಗ್ ಬೋರ್ಡ್ ಮೂಲಕ 1ಲಕ್ಷದ 6 ಸಾವಿರ ಮನೆಗಳನ್ನು ಕಟ್ಟಬೇಕಾಗಿತ್ತು. ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೆ, ಟೋಟಲಿ ಈಗತನಕ ಕಟ್ಟಿರುವುದು ಎರಡೂಕೂಡಿ ೭೦ಳಲ ಮನೆಗಳು. ಈ ೭೦ಳಲ ಮನೆಗಳು ಆಗಬೇಕಾದರೆ ಕನಿಷ್ಟ ೧೧ ಕೋಟಿ ರೂಪಾಯಿ ಬೇಕು.

ನೀವು ಏನು ಹೇಳಿದ್ದೀರಿ, ಇವತ್ತಿನತನಕ 7048 ಮನೆಗಳು ಕಂಪ್ಲೀಟ್ ಆಗಿವೆ;ಹೌಸಿಂಗ್ ಬೋರ್ಡ್ ಮತ್ತು ಡಿಸಿ ಕಡೆಯಿಂದ , ಹೌಸಿಂಗ್ ಬೋರ್ಡ್‌ನಿಂದ 40 ಸಾವಿರ ಪೈಕಿ 6,200 ಅಂಡರ್ ಪ್ರೊಗ್ರೆಸ್ ಇದೆ; ಮತ್ತೆ ಡಿಸಿ ಕಡೆಯಿಂದ 64,880 ಮನೆಗಳು are under progress ಹೀಗೆ ಒಟ್ಟು 1ಲಕ್ಷದ 6 ಸಾವಿರ ಮನೆ ಪೈಕಿ 7048 ಮನೆ ಕಂಪ್ಲೀಟ್ ಆಗಿವೆ ಮತ್ತು 75 ಸಾವಿರ ಮನೆಗಳು ಅಂಡರ್ ಪ್ರೊಗ್ರೆಸ್ ನಲ್ಲಿವೆಯೆಂದು; ಈ 7048 ಮನೆಗಳನ್ನು ನಿಮ್ಮ ಸ್ಟೇಟ್‌ಮೆಂಟ್ ಪ್ರಕಾರ ಕಂಪ್ಲೀಟ್ ಮಾಡುವುದಕ್ಕೆ ಕನಿಷ್ಟ 11ಕೋಟಿ ರೂಪಾಯಿ ಬೇಕು. 75 ಸಾವಿರ ಮನೆಗಳು ಪ್ರೊಗ್ರೆಸ್‌ನಲ್ಲಿವೆ ಎಂದು ಹೇಳುತ್ತೀರಿ, 75 ಸಾವಿರ ಮನೆಗಳು ಅಂಡರ್ ಪ್ರೊಗ್ರೆಸ್ ಇರಬೇಕಾದರೆ 100 ರೂಪಾಯಿಗೆ ಎರಡು ರೂಪಾಯಿ ಖರ್ಚು ಮಾಡಿದ್ದೀರೇನು ನೀವು? 75 ಸಾವಿರ ಮನೆಗಳು ಅಂಡರ್ ಪ್ರೊಗ್ರೆಸ್ ಇರಬೇಕಾದರೆ ಕನಿಷ್ಟ ನೀವು ಒಂದು ಮನೆಗೆ 15-20 ಸಾವಿರ ಖರ್ಚು ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು :- ಸಾಂಡ್ರಾರವರೇ, ನೀವು ಕುಳಿತುಕೊಳ್ಳಿ. ಈ ಪ್ರಶ್ನೆ ಬಗ್ಗೆ ನಿಮ್ಮಲ್ಲಿ ಸರಿಯಾದ ಹಾಗೂ ಖಚಿತವಾದ ಮಾಹಿತಿ ಇಲ್ಲ ಎಂದು ನನಗೂ ಅನಿಸುತ್ತದೆ. ಆದಕ್ಕೆ ನಾನು ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವ್ಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಾವು ಈ ರೀತಿ ತೀರ್ಪನ್ನು ಕೊಟ್ಟಮೇಲೆ ಅವರು ರಾಜೀನಾಮೆಯನ್ನು ಕೊಡಬೇಕು. ಅವರು ಸಚಿವಸಂಪುಟದಲ್ಲಿ ಉಳಿಯಲು ಅರ್ಹರಲ್ಲ.

ಅಧ್ಯಕ್ಷರು:- ಆ ರೀತಿ ಎಷ್ಟು ರಾಜೀನಾಮೆಗಳನ್ನು ತೆಗೆದುಕೊಳ್ಳುತ್ತೀರಿ?

ವಿಷಯ:- ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸಿಗದೇ ಇರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 69(494)

ಶ್ರೀ ಸುಭಾಷ್ ಜೋಷಿ(ನಿಪ್ಪಾಣಿ)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಸರ್ಕಾರದ ಹೊಸ ಆದೇಶದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದರೆ, ಸರ್ಕಾರವು ಈ ಆದೇಶವನ್ನು ಹಿಂತೆಗೆದುಕೊಳ್ಳುವುದೇ?

(ಇ) ಈ ಆದೇಶವನ್ನು ಯಾವಾಗ ಹಿಂತೆಗೆದುಕೊಳ್ಳುವುದು?

ಶ್ರೀ ಧರ್ಮಸಿಂಗ್(ಸಮಾಜ ಕಲ್ಯಾಣ ಸಚಿವರು)

ಭಾರತ ಸರ್ಕಾರದ ನಿಯಮಾವಳಿಗಳಂತೆ ವಿದ್ಯಾರ್ಥಿ ವೇತನ ನೀಡಲು ವಿಧಿಸಿರುವ ಷರತ್ತುಗಳ ಪಾಲನೆಯ ಬಗ್ಗೆ ಇತ್ತೀಚೆಗೆ ನೀಡಲಾದ ಸುತ್ತೋಲೆಯ ಅನುಸಾರ ಪರಿಶೀಲನೆ ಪ್ರಾರಂಭ ಮಾಡಿದ್ದರಿಂದ ಕೆಲವು ಜಿಲ್ಲೆಗಳಲ್ಲಿ ವಿದ್ಯಾರ್ಥಿವೇತನ ಪಡೆಯಲು ತೊಂದರೆಯಾಗಿದೆಯೆಂದು ತಿಳಿದು ಬಂದಿದೆ.

ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.